

**ಕೇಶವರೆಡ್ಡಿ ಹಂದ್ರಾಳ**

'ಕನಸುಗಳ ರಾಶಿಯಿಂದ ಮತ್ತೆ ಮತ್ತೆ ಎದ್ದು ಬಂದು ನನ್ನ ಕನಸಲ್ಲಿ ನರ್ತಿಸಿ ಕಂಗೆಡಿಸಬೇಡ ನನ್ನನ್ನು ನಿರಂತರ ನೀನು...' ಕನಸಿನಲ್ಲೆ ಕನವರಿಸತೊಡಗಿದ ಅವನು.

'ಕನಸು ಕಾಣುವುದನ್ನು ನಿಲ್ಲಿಸಿಬಿಡು ನೀನು. ಕನಸೇ ಕಾಣದಿದ್ದರೆ ನೀನು, ಹೇಗೆ ಬರಲು ಸಾಧ್ಯ ನಿನ್ನ ಕನಸಿಗೆ ನಾನು...' ನುಡಿದು ನಕ್ಕಳವಳು ಪಕ್ಕನೆ, ನಕ್ಕು ನಕ್ಕು ನೀರಾದಳವಳು ಧುತ್ತನೆ. ಅವಳ ಕಣ್ಣಿನ ಕಾಡಿಗೆಯಲ್ಲಿ, ಹಣೆಯ ನೆರಿಗೆಳಲ್ಲಿ, ಕೆನ್ನೆಯ ಕುಳಿಗಳಲ್ಲಿ, ತುಟಿಯಂಚಿನ ತಡಿಯಲ್ಲಿ, ಮುಂಗುರುಳ ತೆರೆಯಲ್ಲಿ ನಗೆ ಬುಗ್ಗೆ ಹಾಕಿತ್ತು ಸಡಗರ ಸಂಭ್ರಮಗಳ ಲಗ್ಗೆ.

'ನೀನು ನಗುವಿನ ನಯಾಗರಾ...' ಅವಳ ಚೆಲುವನ್ನೆಲ್ಲ ಎದೆಗಿಳಿಸಿಕೊಂಡು ನಲಿಯುತ್ತಾ ಉಲಿದನವನು.

'ಕಥೆ ಬಿಡಬೇಡ, ಮೊದಲೇ ಕಥೆಗಾರ ನೀನು; ನಕ್ಕು ಬಿಟ್ಟಾವು ನಿನ್ನ ಮಾತನ್ನು ಕೇಳಿ ಭುವಿ ಬಾನು...' ನಕ್ಕಳವಳು ಮತ್ತೆ, ಮತ್ತೆ ಮತ್ತೆ.

'ಕನಸಿನ ಲೋಕದಿಂದ ಜಿಗಿಯಲಾರೆಯ ನೀನು ನನಸಿನ ಲೋಕಕ್ಕೆ...' ಅವನು ಅವಳ ಹತ್ತಿರ ಸರಿದು ಬೇಡಿದ ಪಿಸುಗುಡುತ್ತಾ.

'ಕನಸೆಂದರೇನು?...' ಕೇಳಿದಳವಳು ಅವನಿಂದ ದೂರ ಸರಿಯುತ್ತಾ.

'ಕನಸೆಂದರೆ ಕಾಮನಬಿಲ್ಲು...' ಹೇಳುತ್ತಾ ಅವಳ ಬಳಿ ಸರಿದ.

'ಅಲ್ಲ...' ಅವಳೆಂದಳು ಅಲ್ಲೆ ನಿಲ್ಲುತ್ತಾ.

'ಕನಸೆಂದರೆ ನೀನೆ...' ಪರವಶನಾಗಿ ಹೇಳಿದ ಅವಳನ್ನು ತಾಕುತ್ತ.

'ಹೌದು, ನಾನೇ...' ಅವಳು ಕ್ಷಣಾರ್ಧದಲ್ಲಿ ಕರಗಿ ಹೋಗಿದ್ದಳು ಅವನ ಮುಂದೆ ನಿರಾಸೆಯ ರಾಶಿಯ ನೂಕುತ್ತಾ.

ಅಲ್ಲಿಗೆ ನಿಲ್ಲಲಿಲ್ಲ, ಅವನು ಛಲದಂಕ ಮಲ್ಲ! ಅವಳನ್ನು ಹಿಡಿಯಲು ತತ್‌ಕ್ಷಣವೇ ಮತ್ತೊಂದು ಕನಸಿನೊಳಕ್ಕೆ ಜಿಗಿದ. ದಟ್ಟವಾದ ಕಾನನದಲ್ಲಿ ನಡೆಯುತ್ತಿದ್ದ ಒಬ್ಬಂಟಿ, ಕತ್ತಲು ಅವನ ಜಂಟಿ. ಕಾನನದ ಕಾಲು ದಾರಿಯಲ್ಲಿ ಎದುರಾಗಿತ್ತು ಜೋರು ಮಳೆ. ಎದೆಯಲ್ಲಿ ಹರಿಯತೊಡಗಿತು ಭಯದ ಹೊಳೆ. ಅಷ್ಟರಲ್ಲಿ ಕಾಲು ದಾರಿಯ ಪಕ್ಕದಲ್ಲೆ ಕಂಡಿತೊಂದು ದೊಡ್ಡ ಹೆಂಚಿನ ಮನೆ. ಸುತ್ತಲೂ ನಳನಳಿಸುತ್ತಿದ್ದವು ತೆಂಗು–ಅಡಿಕೆಯ ಸಮೃದ್ಧ ಗೊನೆ, ಜೊತೆ ಜೊತೆಯಲ್ಲಿಯೇ ಹಬ್ಬಿಕೊಂಡ ಮೆಣಸು, ಏಲಕ್ಕಿಯ ಘಮಘಮಿಸುವ ತೆನೆ.

'ಯಾರಿದ್ದೀರಿ ಒಳಗೆ...' ತೆರೆದ ಬಾಗಿಲ ಮುಂದೆ ನಿಂತು ಕೂಗಿದ.

'ಯಾರದು ಬನ್ನಿ ಒಳಗೆ...' ಮಧುರವಾದ ಹೆಣ್ಣಿನ ಧ್ವನಿ. ಆ ಧ್ವನಿ ಆದೇಶಿಸಿದಂತೆ ಅವನು ಮನೆಯೊಳಕ್ಕೆ ಅಡಿ ಇಟ್ಟ. ಹಿತ್ತಲ ಬಚ್ಚಲಿಗೆ ಹೋಗಿ ಹಂಡೆಯಲ್ಲಿದ್ದ ಬಿಸಿ ನೀರಿನಲ್ಲಿ ಕೈ, ಕಾಲು, ಮುಖ ತೊಳೆದ. ಹಾಯೆನಿಸಿತು. ದೇಹಕ್ಕೂ, ಮನಸ್ಸಿಗೂ. ಗೆಜ್ಜೆಯ ನಿನಾದದೊಂದಿಗೆ ಪ್ರತ್ಯಕ್ಷವಾಗಿದ್ದಳವಳು. ತಲೆಯ ತುಂಬಾ ಸೀರೆಯ ಸೆರಗು, ಮುಖದ ತುಂಬಾ ಮಂದ ಬೆಳಕಿನ ಮೆರಗು. ಬಿಸಿ ಬಿಸಿ ಹಪ್ಪಳ– ಸಂಡಿಗೆ, ಹಬೆಯಾಡುತ್ತಿದ್ದ ಚಹ ಅವನ ಮುಂದಿಟ್ಟಳು. ಅವನು ಗಬಗಬನೆ ತಿಂದ. ಗಟಗಟನೆ ಕುಡಿದ.